ಗಂಟಲಲ್ಲಿ ಗೊರಗೊರ ಎನ್ನುತ್ತ ತ್ರಾಸು ಮಾಡಿತು. ಕಣ್ಣು ಜಿನುಗತೊಡಗಿದವು. ಅವಳನ್ನು ನೋಡಬೇಕೆನ್ನುವ ಕರೆದುಕೊಂಡು ಬರಬೇಕೆನ್ನುವ ಹಂಬಲವನ್ನು ಸನ್ನೆ ಮಾಡಿ ತೋರಿಸಿದ. ನನಗೆ ಅಜ್ಜನ ದುಃಖ ಎಂಥದ್ದು ಎಂಬುದು ಅರ್ಥವಾಗಲಿಲ್ಲವಾದರೂ ಅಳು ತಡೆಯಲಾಗಲಿಲ್ಲ. ಆ ನೋಟುಗಳು ಠಾಕ್ರೀಗೆ ಸಲ್ಲಬೇಕಾದಂಥವು ಎಂಬುದು ಮಾತ್ರ ಅರ್ಥವಾಯಿತು.ಯಾರಿಗೂ ಹೇಳಲಾಗದ ಕತೆಯೊಂದನ್ನು ಒಡಲಲ್ಲಿಟ್ಟುಕೊಂಡು ಅಜ್ಜ ನರಳುತ್ತಿದ್ದ. ಮರುದಿನ ನಾನು ಹೊರಟೆ.

***

ವಿಳಾಸ ಹಿಡಿದು ಜನತಾ ಮನೆಯ ಮುಂದೆ ನಿಂತಿದ್ದೇನೆ. ಮುಚ್ಚಿದಂತಿರುವ ಕದ. ಅದಕ್ಕೆ ಯಾವ ಬೀಗವೂ ಇಲ್ಲ. ಡೋಂಗ್ರಿ ಇಲ್ಲೆ ಎಲ್ಲೋ ಹೋಗಿದ್ದಾನೆ, ಬರುತ್ತಾನೆ... ಎಂಬುದು ವಿಚಾರಿಸಿದಾಗ ಗೊತ್ತಾಯಿತು. ಹಾಗಾದರೆ ಠಾಕ್ರೀ...? ಕದ ನೂಕಿ ಒಳಗೆ ಹೋದೆ. ಗೋಡೆಯಲ್ಲಿ ಒಡೆದಿರುವ ಫೋಟೋದಲ್ಲಿ ಠಾಕ್ರೀ ಮತ್ತು ಡೋಂಗ್ರಿ. ಹಾಗೆ ನೋಡುತ್ತ ನಿಂತವನಿಗೆ ಯಾರೋ ಸಾವ್ಕಾರ... ಎಂದ ಹಾಗೆನಿಸಿ ತಿರುಗಿ ನೋಡಿದೆ.

ಅರೇ... ಸಾವ್ಕಾರ್ ಎಂದು ತೊದಲುತ್ತ ಡೋಂಗ್ರಿ ಜೋಲಿ ಹೊಡೆಯುತ್ತ ನಿಂತಿದ್ದ. ಅವನು ಕಂಠ ಪೂರ್ತಿ ಸೇಂದಿ ಕುಡಿದಿದ್ದ. ಅವನಿಗೆ ನಾನು ಯಾರು, ಯಾವೂರು ಎಂಬುದನ್ನು ಕೇರಿಯ ಮಕ್ಕಳು ಹೇಳಿ ಮನೆಗೆ ಕರೆತಂದಿದ್ದರು. ನಾನು ಅವನನ್ನು ಪಕ್ಕದಲ್ಲಿ ಕೂಡಿಸಿಕೊಂಡು ಮರುಕದಿಂದ ನೋಡಿದೆ. ಠಾಕ್ರೀ ಎಲ್ಲಿ ಎಂದು ವಿಚಾರಿಸಿದೆ. ಅವನು ಒಮ್ಮೆಲೆ ಜೋಷ್ ಬಂದವನಂತೆ ಅವುಡುಗಚ್ಚಿ... ಸಾಲೀ ದಾಗಡಿ ಓಡಿ ಹೋದಳು ಹರಾಮ್‌ಕೋರ್... ಎಂದು ಕುಸಿದು ಕುಳಿತು ಕೈಚೆಲ್ಲಿದ. ಮತ್ತೆ ಓಡಿ ಹೋದಳೆ... ಯಾರೊಂದಿಗೆ...? ಆ ಸಾಬಿ ಅಕೀ ಹಳೆ ಗೆಣೆಯ ಭಕ್ಷ ಮತ್ತ ಬಂದ ಓಡಿಸ್ಕೆಂಡ ಹೊಗ್ಯಾನ... ಮಿಂಡಗಾರ್ತಿ ಅಕೀ. ಡೋಂಗ್ರಿ ಸಿಟ್ಟಿನಿಂದಲೊ ಹತಾಶೆಯಿಂದಲೊ ಒದರುತ್ತಲಿದ್ದ. ಬಿಟ್ಟ ಹ್ವಾದಾಕಿ ನಿಮ್ಮನ್ಯಾಗ ಇದ್ಲು... ಅಲ್ಲೇನು ಕರ್ರಿ ಆತೋ ಮತ್ತ ಗಂಡ ಬೇಕಂತ ಬಂದ್ಲು. ಈಗ ಹಳೆ ಮಿಂಡ ಬಂದ ಮತ್ತ ಬಿಟ್ಟು ಹೋದ್ಲು. ಡೋಂಗ್ರಿಯ ಮಾತುಗಳಿಂದ ಅವಳನ್ನು ಭಕ್ಷ ಹುಡುಕಿಕೊಂಡು ಬಂದಿದ್ದು ಕೇಳಿ ಸಂತೋಷವಾಯಿತಾದರೂ ಮಕ್ಕಳಿಲ್ಲದ ಏಕಾಂಗಿ ಡೋಂಗ್ರಿಯ ಕುರಿತು ಪಾಪ ಎನಿಸಿತು. ಅವಳು ಮತ್ತೆ ಬಂದರೆ ಮನೆ ಸೇರಿಸಿಕೊಳ್ಳುತ್ತೀಯಾ... ಕೇಳಬೇಕೆನಿಸಿತು. ಕೇಳಿದೆ.

ಡೋಂಗ್ರಿ ಏನೂ ಹೇಳದೆ ತಲೆ ತಗ್ಗಿಸಿ ಕೂತಿದ್ದ. ಸಾವ್ಕಾರ... ಅವ್ಳು ನಿಮ್ಮನೆಲಿ ಇದ್ಲು. ಎಲ್ಲ ಬೆಚ್ಚಗಿತ್ತು. ಆದರೂ ಅವಳಿಗೆ ಗಂಡ ನೆಪ್ವಾದ. ನಿಮ್ಮ ಅಜ್ಜಾವ್ರನ್ನ ಹ್ಯೇಂಗ ಬೇಕೊ ಹಂಗ ನೋಡ್ಕೆಂಡ್ಲು... ನಿಮ್ಮಜ್ಜಿನೂ ನೋಡ್ಕೆಳ್ಳಲಾರದಷ್ಟು...? ಏನ್ ಹಳಿಸ್ತೊ ಏನ್ ಕತಿಯೋ. ಮನಸ ಯಾರ್ ಬಲ್ರು. ನಾ ನೆಪ್ವಾದೆ. ಬರ್ಬೇಕಂದ್ಲು. ದಾರಿ ಖರ್ಚಿಗೆ ಸಾವ್ರ ದೀಡ ಸಾವ್ರ ಕೇಳಿದ್ರ ನಿಮ್ಮ ಅಜ್ಜವ್ರು ನಾಳಿ ನಾಡದ್ದ ಅಂತ ಸಾಗ ಹಾಕಿದ್ರಂತ. ಅವ್ರಿಗೆ ಕೊಡ ಮನ್ಸೂ ಇರಲಿಲ್ಲ, ಕಳ್ಸೋ ಮನ್ಸೂ ಇದ್ದಂಗ ಕಾಣಲಿಲ್ಲ. ಮುದುವನ ಕೂಡ ಸೆರಗು ಹಾಸಿದವಳಿಗೆ...

ಡೋಂಗ್ರಿಯ ಮಾತು ಕೇಳುತ್ತ ನಾನು ಕುಸಿಯತೊಡಗಿದೆ. ನನಗೆ ಠಾಕ್ರೀಯ ಸಾವ್ಕಾರ ಯಾರು ಎಂಬುದು ಗೊತ್ತಾಗಿತ್ತು.



ಅಕೀ ಏಟ ಆಗ್ಲೇ ನನ್ನ ಹೆಣ್ತಿ. ನಿಮ್ಮನ್ಯಾಗ ಆಕಿಗೆ ಆಗಿದ್ದನ್ನ ಒಂದೂ ಇಡದಂಗ ಎಲ್ಲಾ ಹೇಳಿಕೊಂಡ ಅತ್ಲು. ಬದುಕು ಮತ್ತ ಹಳಸಿದ್ರ ನಾಳೆ ಮತ್ತ ಬಂದಾಳು. ಡೋಂಗ್ರಿಯ ಮಾತು ಕೇಳಿ ಅವನೆಷ್ಟು ದೊಡ್ಡ ಮನುಷ್ಯ ಎನಿಸಿತು.

***

ಅಜ್ಜ ತನ್ನ ನೀಚತನದಿಂದ ಪರಿತಪಿಸುತ್ತಲಿದ್ದ. ಠಾಕ್ರೀಯನ್ನು ಕಂಡು ಕ್ಷಮೆ ಕೇಳಿ ಅವಳು ಕೇಳಿದ್ದ ದುಡ್ಡನ್ನು ಕೊಡದಿದ್ದರೆ ಅಜ್ಜನಿಗೆ ಮುಕ್ತಿಯಿಲ್ಲ. ಆದರೆ ಠಾಕ್ರೀಯನ್ನು ಎಲ್ಲಿಂದ ತರುವುದು. ಅವಳ